ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 25.11.2023.**

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ**

4) ನಾನು 2 ನೇ ಪಿ.ಯು.ಸಿ. ವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಗೊತ್ತು. ನಾನು ಗೃಹಿಣಿಯಾಗಿರುತ್ತೇನೆ. ನನಗೆ ಸಾಕ್ಷಿ ಹೇಳುವಂತೆ ಕೋರ್ಟಿನಿಂದ ಸಮನ್ಸ ಬಂದಿರಲಿಲ್ಲ ಎಂದರೆ ಸರಿ. ನನ್ನನ್ನು ಸಾಕ್ಷಿ ಹೇಳುವಂತೆ ವಾದಿ ರವಿಯವರೇ ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ವಾದಿ ರವಿಯವರೇ ಹೇಳಿ ಬರೆಯಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಎಲ್ಲಿ ತಯಾರು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆಗಳಲ್ಲಿ ಏನೇನು ಬರೆದಿದೆ ಎಂದು ಗೊತ್ತಿದೆಯೇ? ಎಂದರೆ ಗೊತ್ತು ಹಣ ಕೊಟ್ಟಾಗ ನಾನೂ ಕೂಡ ಹಾಜರಿದ್ದೆ ಎಂದು ಬರೆದಿರುತ್ತದೆ.

5) ದಿನಾಂಕಃ 04.03.2016 ರಂದು ಅಪರಾಹ್ನ 12.30 ಘಂಟೆಗೆ ನಾನು ಯಾವ ಸ್ಥಳದಲ್ಲಿ ಇದ್ದೆ ಎಂದರೆ ಆ ದಿನ ಅಪರಾಹ್ನ 12.30 ರಿಂದ 1.30 ಘಂಟೆಯವರೆಗೆ ವಾದಿ ರವಿಯವರ ಮನೆಯಲ್ಲಿ ಇದ್ದೆ. ನನ್ನನ್ನು ಆ ದಿನ ಆ ಸ್ಥಳಕ್ಕೆ ಬರುವಂತೆ ಯಾರು ಕರೆದಿದ್ದರು ಎಂದರೆ ನನ್ನನ್ನು ಯಾರೂ ಕೂಡ ಕರೆದಿರಲಿಲ್ಲ, ನಾನು ವಾದಿ ರವಿಯವರ ತಾಯಿಯ ಸ್ನೇಹಿತೆಯಾಗಿದ್ದು, ಅವರ ಮನೆಗೆ ಮಾತನಾಡಿಸಲು ಹೋಗಿದ್ದೆ. ನಾನು ದಿನಾಂಕಃ 04.03.2016 ರಂದು ಈ ದಾವಾ ವ್ಯಾಜ್ಯದ ವಿಚಾರದಲ್ಲಿ ವಾದಿ ರವಿಯವರ ಮನೆಗೆ ಹೋಗಿದ್ದನ್ನು ಬಿಟ್ಟರೆ ಪುನಃ ಈ ದಾವಾ ವ್ಯಾಜ್ಯದ ವಿಚಾರವಾಗಿ ವಾದಿಯ ಮನೆಗೆ ನಾನು ಯಾವತ್ತೂ ಹೋಗಿರಲಿಲ್ಲ. ದಿನಾಂಕಃ 04.03.2016 ರಂದು ವಾದಿಯ ಮನೆಗೆ ಪ್ರತಿವಾದಿಯು ಬಂದಿರಲಿಲ್ಲ ಎಂದರೆ ಬಂದಿದ್ದರು. ಆ ದಿನ ಪ್ರತಿವಾದಿ ವಾದಿಯ ಮನೆಗೆ ಯಾವ ಸಮಯಕ್ಕೆ ಬಂದರು ಎಂದರೆ ನಾನು ವಾದಿಯ ಮನೆಗೆ ಅಪರಾಹ್ನ 12.30 ಘಂಟೆಗೆ ಹೋದೆ, ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಆಗಲೇ ಪ್ರತಿವಾದಿ ಅಲ್ಲಿ ಇದ್ದರು. ನನ್ನ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ಹೇಳಿದ ರೂ.20 ಲಕ್ಷ ಮೊತ್ತವನ್ನು ವಾದಿಯು ಪ್ರತಿವಾದಿಗೆ ಆ ದಿನ ನನ್ನ ಸಮಕ್ಷಮದಲ್ಲಿ ಕೊಡಲಿಲ್ಲ, ಮುಂಚೆಯೇ ಕೊಟ್ಟಿದ್ದೇವೆ ಎಂದು ಹೇಳಿದ್ದರು. ದಿನಾಂಕಃ

04.03.2016 ಕ್ಕಿಂತ ಮುಂಚೆ ನಾನು ಪ್ರತಿವಾದಿಯನ್ನು ಯಾವತ್ತೂ ನೋಡಿರಲಿಲ್ಲ ಎಂದರೆ ಸರಿ. ಸದರಿ ದಿನಾಂಕದಂದು ವಾದಿ ಮತ್ತು ಪ್ರತಿವಾದಿಯ ನಡುವೆ ಆಗಿತ್ತು ಎನ್ನುವ ದಾಖಲೆಯ ಹೆಸರೇನೆಂದು ನನಗೆ ಗೊತ್ತಿದೆಯೇ? ಎಂದರೆ ಆ ದಾಖಲೆಯ ಹೆಸರು ಗೊತ್ತಿಲ್ಲ, ಆದರೆ ಸಾಲದ ದಾಖಲೆ ಎಂದು ಹೇಳಿದ್ದರು. ಆ ದಾಖಲೆಗೆ ಸಹಿ ಮಾಡುವ ಮುಂಚೆ ನಾನು ಅದನ್ನು ಓದಿದ್ದೆ. ನಾನು ನಿಜವಾಗಿಯೂ ಆ ದಾಖಲೆಯನ್ನು ಓದಿ ಸಹಿ ಮಾಡಿದ್ದೇ ಆಗಿದ್ದಲ್ಲಿ ಆ ದಾಖಲೆಯ ಹೆಸರನ್ನು ಹೇಳಿರುತ್ತಿದ್ದೆ, ಆದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ತಾಯಿಗೆ ಸ್ನೇಹಿತೆಯಾಗಿರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಶಾಮೀಲಾಗಿ ನಿಪಿ-1 ನ್ನು ಸೃಷ್ಟಿಸಿ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಶಾಮೀಲಾಗಿ ಪ್ರತಿವಾದಿಯ ಸಹಿಯನ್ನು ಸೃಷ್ಟಿಸಿ ಕರಾರನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಮತ್ತು ಪ್ರತಿವಾದಿ ಯಾವುದೇ ದಾಖಲೆ ಬರೆದುಕೊಡದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಪಿ-1 ಕ್ಕೆ ಸಹಿ ಮಾಡುವಂತೆ ನನ್ನನ್ನು ಯಾವತ್ತೂ ಕೇಳಿರಲಿಲ್ಲ ಎಂದರೆ ವಾದಿ ಮತ್ತು ಪ್ರತಿವಾದಿ ಇಬ್ಬರೂ ಸಹಿ ಮಾಡುವಂತೆ ಕೇಳಿದ್ದರು. ವಾದಿ ಈ ದಾವೆಯ ವಾದ ಪತ್ರದಲ್ಲಿ ಏನೇನು ಬರೆಯಿಸಿದ್ದಾರೆಂದು ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. ವಾದಿಗೆ ಅನೂಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**